# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ :27-10-2021

(ದಿನಾಂಕ:13-10-2021ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಲ್ಪಟ್ಟ ಸಭೆ)

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ– 577 451

ಸಂಖ್ಯೆ: ಕುವಿ:ಯುಎಟಿ–I:ಸಿಂ–5–21: 03 :2021–22 ದಿನಾಂಕ:30–03–2022 6-4-2022

ಮಾನ್ಯರೆ,

ವಿಷಯ: ದಿನಾಂಕ:27–10–2021ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ಅಂತಿಮ ಅಂಗೀಕೃತ ನಡಾವಳಿ.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ – 2000ರ ಪ್ರಕರಣ – 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು– ಅಧ್ಯಾಯ– III ರ ಪ್ರಕರಣ– 16 ರನ್ವಯ ದಿನಾಂಕ:27–10–2021 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ಅಂತಿಮ ಅಂಗೀಕೃತ ನಡಾವಳಿಯನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**ಗೆ,**

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:27-10-2021 ರಂದು ಪೂರ್ವಾಹ್ನ 11.00 ಗಂಟೆಗೆ ವಿಶ್ವವಿದ್ಯಾಲಯದ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ (ದಿನಾಂಕ:13-10-2021ರಂದು ಮುಂದೂಡಲ್ಪಟ್ಟ ಸಭೆ) ಸಿಂಡಿಕೇಟ್‌ನ ಸಾಮಾನ್ಯ ಸಭೆಯ ಅಂತಿಮ ಅಂಗೀಕೃತ ನಡಾವಳಿಗಳು.

<u>ಹಾಜರಾದ ಸದಸ್ಯರು:</u>

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಸಿ.ಎಂ. ತ್ಯಾಗರಾಜ, ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 5. | ಶ್ರೀ ಎನ್.ಆರ್. ಮಂಜುನಾಥ | ಸದಸ್ಯರು |
| 6. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 7. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 8. | ಶ್ರೀ ಧರ್ಮ ಪ್ರಸಾದ್ ಜಿ. | ಸದಸ್ಯರು |
| 9. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 10. | ಶ್ರೀ ಎಸ್.ಆರ್. ನಾಗರಾಜ್ | ಸದಸ್ಯರು |
| 11. | ಪ್ರೊ. ಕೃಷ್ಣ ವಿ., ಪ್ರಾಧ್ಯಾಪಕರು | ಸದಸ್ಯರು |
| 12. | ಡಾ. ಯುವರಾಜ ಬಿ.ಹೆಚ್. ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು | ಸದಸ್ಯರು |
| 14. | ಡಾ. ವಿಷ್ಣುಮೂರ್ತಿ ಕೆ.ಎ., ಪ್ರಾಂಶುಪಾಲರು | ಸದಸ್ಯರು |

<u>ಗೈರುಹಾಜರಾದ ಸದಸ್ಯರು:</u>

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, | ಸದಸ್ಯರು |
| 5. | ಡಾ. ಅಶೋಕ್ ಡಿ.ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು | ಸದಸ್ಯರು |

<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>

| | | |
|---|---|---|
| 01 | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |

<u>ಪ್ರಸ್ತಾವನೆ:</u> ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಪತಿಯವರು ಆತ್ಮೀಯವಾಗಿ ಸ್ವಾಗತ ಕೋರಿದರು. ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶಿತರಾದ ಡಾ. ವಿಷ್ಣುಮೂರ್ತಿ ಕೆ.ಎ. ಪ್ರಾಂಶುಪಾಲರು, ಸರ್.ಎಂ.ವಿ ವಿಜ್ಞಾನ ಕಾಲೇಜು, ಭದ್ರಾವತಿ. – ಇವರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಗೆ ಪರಿಚಯಿಸಲಾಯಿತು.

ಮುಂದುವರೆದು ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ 31ನೇ ಘಟಿಕೋತ್ಸವ ಸಮಾರಂಭವನ್ನು ಶೀಘ್ರವಾಗಿ ಆಯೋಜಿಸಬೇಕಾಗಿದ್ದು, ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನು ಅಂತಿಮಗೊಳಿಸಿ ಮುಂದಿನ ಕ್ರಮಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

ನಂತರದಲ್ಲಿ, ಸಭೆಯ ಕಾರ್ಯ ಸೂಚಿಯನ್ವಯ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

## ದಿನಾಂಕ:13–08–2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ

### ಪರೀಕ್ಷಾ ವಿಭಾಗ

**2021–ಸಿಂ–3.12(ಬಿ):** M/s KEONICS Bangalore, - ಇವರು Online Examination Mangement system ಅಳವಡಿಸಲು ಸಲ್ಲಿಸಿರುವ ಪ್ರಸ್ತಾವನೆ ಅನುಮೋದನೆ ಕುರಿತು.

**ಚರ್ಚೆ :** ವಿಷಯವನ್ನು ಮಂಡಿಸಿದ ಕುಲಸಚಿವ(ಮೌಲ್ಯಮಾಪನ) ಇವರು ಈ ವಿಷಯವು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು, ಚರ್ಚೆಯಾಗದೆ ಇರುವುದರಿಂದ ಪುನ: ವಿಷಯವನ್ನು ಮಂಡಿಸಲಾಗಿದೆ ಎಂದರು.

**ನಿರ್ಣಯ :** ಚರ್ಚೆಯ ನಂತರ ವಿಷಯವನ್ನು ಯಾವುದೇ ನಿರ್ಣಯ ಕೈಗೊಳ್ಳದೇ ಸರ್ವಾನುಮತದಿಂದ ಹಿಂಪಡೆಯಲಾಯಿತು.

### ಅಭಿವೃದ್ಧಿ ವಿಭಾಗ

**2021–ಸಿಂ3.14(ಎ)** ಶ್ರೀ ಪ್ರಮೋದ್ ಮಳ್ಳಗಟ್ಟಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತು.

**ಚರ್ಚೆ :** ಕುಲಸಚಿವರು ವಿಶ್ವವಿದ್ಯಾಲಯದಲ್ಲಿ ಶ್ರೀ. ಪ್ರಮೋದ್ ಮಳ್ಳಗಟ್ಟಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತು ಪ್ರಸ್ತಾವನೆ ಬಂದಿದ್ದು ಸಭೆಗೆ ಮಂಡಿಸಿದೆ ಎಂದರು. ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಇವರು ಎಲ್ಲಾ ಮಹಾನ್ ವ್ಯಕ್ತಿಗಳ ಒಂದು ಪಟ್ಟಿಯನ್ನು ಸಿದ್ದಪಡಿಸಿ ರೂಪುರೇಷೆಗಳನ್ನು ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿದರು. ಹಾಗೂ ಮುಂದುವರೆದು ಪ್ರಸಿದ್ಧ ಸಮಾಜ ಸೇವಕರಾದ ನಾ. ಕೃಷ್ಣ ರವರ ಅಧ್ಯಯನ ಪೀಠವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವಂತೆ ಹೇಳಿದರು.

ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಇವರು ಮಾತನಾಡಿ ಪ್ರಸಿದ್ಧ ಸಮಾಜ ಸೇವಕರಾದ ನಾ. ಕೃಷ್ಣ ಇವರು ಆರೋಗ್ಯ ಕ್ಷೇತ್ರದ ವಿಸ್ಮಯ, ರಕ್ತದ ಕ್ಯಾನ್ಸರ್ ಹೊಂದಿದ್ದ ಇವರು ಮೃತ್ಯುವನ್ನು ಗೆದ್ದ ಮೃತ್ಯುಂಜಯ ಎಂದರು.

ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಪೂರಕ ಮಾಹಿತಿ ಕೊಟ್ಟಲ್ಲಿ ನಾ. ಕೃಷ್ಣ ಅಧ್ಯಯನ ಪೀಠ ಸ್ಥಾಪಿಸಲು ಪರಿಶೀಲಿಸಲಾಗುವುದು ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ಮಾತನಾಡುತ್ತಾ, ಪ್ರೊ. ಜಿ.ಎಸ್. ಶಿವರುದ್ರಪ್ಪ ಹಾಗೂ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿನ ಪ್ರತಿಭಾವಂತರುಗಳ ಅಧ್ಯಯನ ಪೀಠಗಳನ್ನು ಸ್ಥಾಪಿಸಬಹುದು ಎಂದು ಹೇಳಿದರು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಇರುವ ಎಲ್ಲಾ ಪೀಠಗಳ ಕಾರ್ಯಕ್ರಮಗಳನ್ನು ಸೂಕ್ತ ರೀತಿಯಲ್ಲಿ ನಡೆಸಬೇಕೆಂದು ಸೂಚಿಸಿದರು.

ಇದಕ್ಕೆ ಪ್ರತಿಯಾಗಿ ಮಾನ್ಯ ಕುಲಪತಿಗಳು, ಎಲ್ಲಾ ಅಧ್ಯಯನ ಪೀಠಗಳ ಚಟುವಟಿಕೆಗಳನ್ನು ಸರಿಯಾಗಿ ನಿರ್ವಹಿಸಲು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು

**ನಿರ್ಣಯ :** ಸುಧೀರ್ಘ ಚರ್ಚೆಯ ನಂತರ ಪ್ರಸಿದ್ಧ ಸಮಾಜ ಸೇವಕರಾದ ನಾ. ಕೃಷ್ಣಪ್ಪರವರಿಗೆ ಸಂಬಂಧಿಸಿದ ಪೂರಕ ದಾಖಲೆಗಳು ಸಲ್ಲಿಕೆಯಾದ ನಂತರ ಅವರ ಅಧ್ಯಯನ ಪೀಠವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಬಗ್ಗೆ ಪರಿಶೀಲಿಸಲು ನಿರ್ಣಯಿಸಲಾಯಿತು. ಹಾಗೂ ವಿವಿಧ ಪೀಠಗಳನ್ನು ಸ್ಥಾಪಿಸಲು ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು

ಸಲ್ಲಿಸಲು, ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕ್ರೋಢೀಕರಿಸಿ ವರದಿಯನ್ನು ಸಿದ್ದಪಡಿಸಿ ಸಾರ್ವಜನಿಕ ಸಂಪರ್ಕ ಅಧಿಕಾರಿಗಳ ಮೂಲಕ ಅಭಿವೃದ್ಧಿ ವಿಭಾಗಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

## ಶೈಕ್ಷಣಿಕ ವಿಭಾಗ

**2021–೩೦–3.17(ಇ):** Design Development Implementation & Maintainance of Fraternity Platform Infrastructure (FPI)ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಉದ್ದೇಶಿಸಿರುವ ಬಗ್ಗೆ.

ಚರ್ಚೆ: ಮಾನ್ಯ ಕುಲಪತಿಗಳು ಮಾತನಾಡುತ್ತಾ, ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಎಲ್ಲಾ ಕಾಲೇಜುಗಳಲ್ಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅಭ್ಯಸಿಸಿರುವ ಹಳೆಯ ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಹೊಂದಿರುವ ಮತ್ತು ಪದವಿ ಪಡೆದು ನಿರ್ಗಮಿಸುವ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಬೋಧಕ ವರ್ಗವನ್ನು ಮಾಹಿತಿ ತಂತ್ರಜ್ಞಾನದ ಉತ್ಕೃಷ್ಟವಾದ ತಂತ್ರಾಂಶದ ಬಳಕೆಯೊಂದಿಗೆ ನಿರಂತರವಾಗಿ ಒಗ್ಗೂಡಿಸುವುದರೊಂದಿಗೆ ಸಮ್ಮಿಲನಗೊಳಿಸಿ, ಒಂದೇ ವೇದಿಕೆಯಡಿ ಪರಸ್ಪರರಲ್ಲಿ ನಿರಂತರವಾಗಿ ಭೌತಿಕ ಜ್ಞಾನವನ್ನು ಹಂಚಿಕೊಳ್ಳುವುದು ಮತ್ತು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಎಲ್ಲಾ ಘಟಕ ಮತ್ತು ಸಂಯೋಜಿತ ಕಾಲೇಜುಗಳ ಸರ್ವಾಂಗೀಣ ಅಭಿವೃದ್ಧಿ ಕಾರ್ಯವು ಸೇರಿದಂತೆ ಹಲವಾರು ಉಪಯುಕ್ತತೆಗಳನ್ನು ಪಡೆಯುವ ಉದ್ದೇಶಕ್ಕಾಗಿ Design Development Implementation & Maintainance of Fraternity Platform Infrastructure (FPI)ನ್ನು ಅಗತ್ಯವಿರುವ ಯೋಜನೆಯಾಗಿದ್ದು, ಇದು ಸದುದ್ದೇಶವುಳ್ಳ ಒಂದು ಉತ್ತಮ ಪ್ರಾಜೆಕ್ಟ್ ಆಗಿರುತ್ತದೆ. ವಿಶ್ವವಿದ್ಯಾಲಯದಲ್ಲಿ ಈ ಯೋಜನೆಯನ್ನು ಆರಂಭ ಮಾಡಿದಲ್ಲಿ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ವಿಕಾಸಕ್ಕೆ ಹಾಗೂ ಉದ್ಯೋಗ ಪಡೆಯಲು ಉತ್ತಮ ಅವಕಾಶ ಸಿಗಲಿದ್ದು ತುಂಬಾ ಅನುಕೂಲವಾಗಲಿದೆ ಎಂದರು.

ಸದಸ್ಯರಾದ ಶ್ರೀ ಎಸ್.ಆರ್. ನಾಗರಾಜ್ ರವರು ಮಾತನಾಡಿ ಸದರಿ ಯೋಜನೆ ಅನುಷ್ಠಾನದ ಟೆಂಡರ್ ಕಮಿಟಿಯಲ್ಲಿ ನಾನೂ ಕೂಡ ಒಬ್ಬ ಸದಸ್ಯನಾಗಿದ್ದು ಇದನ್ನು ಪರಿಶೀಲಿಸಿದ್ದೇನೆ, ಇದು ಒಂದು ಒಳ್ಳೆಯ ಪ್ರಾಜೆಕ್ಟ್ ಆಗಿದ್ದು, ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ಎಲ್ಲರೂ ಈ ಫ್ಲಾಟ್‌ಫಾರ್ಮ್ ಮೂಲಕ ನೇರಾನೇರ ಸಂಪರ್ಕಕ್ಕೆ ಬರಬಹುದು ಎಂದರು.

ನಂತರ ಮಾತನಾಡಿದ ಮಾನ್ಯ ಕುಲಸಚಿವರು ಈ ಯೋಜನೆ ಕುರಿತಂತೆ ಹಿಂದೆಯೇ ಟೆಂಡರ್ ಕರೆದು ಆರ್ಥಿಕ ಬಿಡ್ ತೆರೆಯಲಾಗಿದ್ದು, ದಿನಾಂಕ:13-07-2021ರಂದು ದರ ಸಮಾಲೋಚನೆಯನ್ನೂ ನಡೆಸಿರುತ್ತಾರೆ. ಈ ಪ್ರಕಾರ ನೊಂದಣಿಯಾಗುವ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಸಂಗ್ರಹಿಸುವ ಮೊತ್ತದಲ್ಲಿ ಸಂಸ್ಥೆಗೆ ಶೇಕಡಾ 80 ಭಾಗ ಹಾಗೂ ವಿಶ್ವವಿದ್ಯಾಲಯಕ್ಕೆ ಶೇಕಡಾ 20 ಭಾಗವೆಂದು ಸಮಿತಿಯು ನಿರ್ಧರಿಸಿರುತ್ತದೆ. ಆದರೆ ಇದು ಸಮಂಜಸವಲ್ಲವೆಂದು ಕಂಡು ಬರುತ್ತಿರುವುದರಿಂದ ಚರ್ಚೆಗೆ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀಮತಿ ಕಿರಣ ರವೀಂದ್ರ ದೇಸಾಯಿಯವರು ಮಾತನಾಡಿ, ಇದು ಸಮಂಜಸವಲ್ಲ ವಿಶ್ವವಿದ್ಯಾಲಯಕ್ಕೆ ಗರಿಷ್ಠ ಮೊತ್ತ ಬರಬೇಕು ಎಂದರು.

ಆಗ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಈ ಯೋಜನೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಿಂದ ಎಷ್ಟು ಹಣವನ್ನು ಭರಿಸಲಾಗುತ್ತಿದೆ ಹಾಗೂ

ಟೆಂಡರ್‌ನ ಮೊತ್ತವನ್ನು ಸರಿಯಾಗಿ ಪರಿಶೀಲಿಸಿ ನಮೂದಿಸುವುದು ಎಂದರು ಹಾಗೂ ಈ ಯೋಜನೆಯ ಬಗ್ಗೆ ವಿವರವಾದ ಮಾಹಿತಿ ತಮಗೆ ಬೇಕು ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡುತ್ತಾ ನಮ್ಮ ವಿಶ್ವವಿದ್ಯಾಲಯದಲ್ಲಿರುವ ಯು.ಸಿ.ಸಿ.ಎಫ್., ಕಂಪ್ಯೂಟರ್ ಸೈನ್ಸ್ ವಿಭಾಗ ಹಾಗೂ ಇತರೆ ವಿಭಾಗಗಳಲ್ಲಿಯೇ ಹಲವಾರು ಪರಿಣಿತರಿರುತ್ತಾರೆ. ಅವರಿಂದಲೇ ಸದರಿ ಪ್ರಾಜೆಕ್ಟ್ ಮಾಡಿಸಬಹುದು ಎಂದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ್‌ರವರು ಮಾತನಾಡಿ ಟೆಂಡರ್‌ನಲ್ಲಿ ಆಯ್ಕೆಯಾದ ಪಾರ್ಟಿಯವರನ್ನೇ ಇನ್ನೊಮ್ಮೆ ಕರೆಸಿ ನಿಯಮಾನುಸಾರ ಚರ್ಚಿಸಿ ನಿರ್ಧಾರ ಕೈಗೊಳ್ಳಬಹುದು ಎಂದರು.

ನಂತರ ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಈಗಿರುವ ಅಲ್ಯುಮಿನಿ ಮತ್ತು ಅವರ ಅಸೋಸಿಯೇಷನ್ ಬಗ್ಗೆ ಮಾಹಿತಿ ಕೇಳಿದರು.

ಇದಕ್ಕೆ ಉತ್ತರಿಸಿದ ಸದಸ್ಯರಾದ ಪ್ರೊ. ವಿ. ಕೃಷ್ಣರವರು ವಿಶ್ವವಿದ್ಯಾಲಯದ ಪ್ರತಿ ವಿಭಾಗಗಳ ಹಂತದಲ್ಲಿ ಮಾತ್ರ ಅಲ್ಯುಮಿನಿ ಇರುತ್ತದೆ. ಆದರೆ ಡಾಕ್ಯುಮೆಂಟೇಷನ್ ಇರುವುದಿಲ್ಲ ಎಂದು ತಿಳಿಸಿದರು.

ನಂತರ ಮತ್ತೆ ಮಾತನಾಡಿದ ಮಾನ್ಯ ಕುಲಸಚಿವರು ಡಾಕ್ಯುಮೆಂಟೇಷನ್ ಮಾಡಬೇಕು ಎಂದರು. ಇತರ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಹಾಗಿದ್ದಲ್ಲಿ ವಿಶ್ವವಿದ್ಯಾಲಯದ ಹಂತದಲ್ಲಿಯೇ ಕ್ರಮಕೈಗೊಳ್ಳುವುದು ಸೂಕ್ತ ಎಂದರು.

ಮಾನ್ಯ ಕುಲಸಚಿವರು ಮಾತನಾಡಿ ಪ್ರತಿಯೊಂದು ವಿಭಾಗಗಳಿಗೆ ಪತ್ರ ಬರೆದು ಅಲ್ಯುಮಿನಿ ಮಾಹಿತಿಯ ಡೇಟಾವನ್ನು ಕಲೆಕ್ಟ್ ಮಾಡಲು ಸೂಚಿಸುವುದಾಗಿ ತಿಳಿಸಿದರು ಹಾಗೂ ನಂತರ ವಿಶ್ವವಿದ್ಯಾಲಯದಲ್ಲಿರುವ ಸಾಫ್ಟ್‌ವೇರ್ ಪರಿಣಿತರಿಂದ ವಿಶ್ವವಿದ್ಯಾಲಯದಲ್ಲಿರುವ ವೆಬ್‌ಸೈಟ್ ನಲ್ಲಿ ಅಲ್ಯುಮಿನಿಗೆ ಪ್ರತ್ಯೇಕ ಕಾಲಂ ನಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಬಹುದು ಎಂದರು. ಹಾಗೂ ಇದಕ್ಕೆ ಪ್ರತ್ಯೇಕ ಅಪ್ಲಿಕೇಷನ್ (App) ಮಾಡಿ ಇದರ ಸಕ್ಸಸ್‌ನ್ನು ಮೊದಲ ಹಂತದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಪರಿಶೀಲಿಸಿ ನಂತರ ಪ್ರಕಟಿಸಲು ಕ್ರಮಕೈಗೊಳ್ಳಬಹುದು ಎಂದರು.

ಇದಕ್ಕೆ ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ Design Development, Implementation & Maintainance of Fraternity Platform Infrastructure (FPI) ಈ ಯೋಜನೆಯ ವಿವರಗಳನ್ನು ಕೂಲಂಕಷವಾಗಿ ಚರ್ಚಿಸಲು ವಿವರಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತಿಳಿಸಿ ಮುಂದೂಡಲಾಯಿತು.

## ದಿನಾಂಕ:13-10-2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯಗಳು

## ಪ್ರಾಧಿಕಾರಗಳ ವಿಭಾಗ

**2021-ಸಿಂ-5.01:** ದಿನಾಂಕ:14-07-2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ

ನಿರ್ಣಯ : ಚರ್ಚೆಯ ನಂತರ ದಿನಾಂಕ:14-07-2021 ರಂದು ನಡೆದ ಸಿಂಡಿಕೇಟ್ ನ ಸಾಮಾನ್ಯ ನಡಾವಳಿಯನ್ನು ಧೃಡೀಕರಿಸಲಾಯಿತು.

**2021-ಸಿಂ-5.02 :** ದಿನಾಂಕ:13-08-2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

ನಿರ್ಣಯ : ಚರ್ಚೆಯ ನಂತರ ದಿನಾಂಕ:13-08-2021 ರಂದು ನಡೆದ ಸಿಂಡಿಕೇಟ್ ನ ಸಾಮಾನ್ಯ ನಡಾವಳಿಯನ್ನು ಧೃಡೀಕರಿಸಲಾಯಿತು.

**2021-ಸಿಂ-5.03:** ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ : ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-5.04:** "STATUTES GOVERNING THE UP-GRADATION AND RE-ORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY." ಪರಿನಿಯಮದ ಘಟನೋತ್ತರ ಅನುಮೋದನೆ ಕುರಿತು.

ಚರ್ಚೆ: ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು ಈ ಪರಿನಿಯಮವನ್ನು ದಿನಾಂಕ:13-08-2021ರಂದು ನಡೆದ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಆದರೆ ಸದರಿ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರೂ ಹಾಗೂ ಪರಿನಿಯಮ ಸ್ಥಾಯಿ ಸಮಿತಿಯ ಅಧ್ಯಕ್ಷರೂ ಆದ ಪ್ರೊ. ವಿ. ಕೃಷ್ಣ – ಇವರು ಈ ಪರಿನಿಯಮವು ಪರಿನಿಯಮ ಸ್ಥಾಯಿ ಸಮಿತಿಯ ಗಮನಕ್ಕೆ ಬಾರದೇ ನೇರವಾಗಿ ಮಂಡಿಸಿರುವುದರಿಂದ ನಿಯಮಾನುಸಾರ ಸ್ಥಾಯಿ ಸಮಿತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆಯಾದ ನಂತರ ಸಿಂಡಕೇಟ್ ಸಭೆಗೆ ಮಂಡಿಸಬೇಕೆಂದು ಕೋರಿದರು. ಈ ಹಿನ್ನೆಲೆಯಲ್ಲಿ ಪರಿನಿಯಮವನ್ನು ಸ್ಥಾಯಿ ಸಮಿತಿಗೆ ಮಂಡಿಸಿ ನಂತರ ಪುನ: ಈ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಪ್ರೊ. ವಿ. ಕೃಷ್ಣ ಇವರು ಮಾತನಾಡುತ್ತಾ, ಪರಿನಿಯಮದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದರು ಹಾಗೂ ಪರಿನಿಯಮವನ್ನು 2018 ರಲ್ಲಿ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಸರ್ಕಾರಕ್ಕೆ ಕಳುಹಿಸಲಾಗಿರುವುದರಿಂದ ಇದನ್ನು ಈಗಿನ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿರುವುದನ್ನು ಪ್ರಸ್ತಾಪಿಸಿದರು.

ಸದಸ್ಯರಾದ ಶ್ರೀ. ರಾಮಲಿಂಗಪ್ಪ ಹೆಚ್. – ಇವರು ಮಾತನಾಡುತ್ತಾ, ಈಗಾಗಲೇ ಪ್ರಭಾರ ಭತ್ಯೆಯನ್ನು ಪಾವತಿಸುತ್ತಿರುವುದರಿಂದ ಹೆಚ್ಚಿನ ಆರ್ಥಿಕ ಹೊರೆಯಾಗುತ್ತಿದೆ. ಆದುದರಿಂದ ನಿಯಮದಲ್ಲಿ ಅವಕಾಶವಿರುವವರಿಗೆ ಬಡ್ತಿ ನೀಡುವುದು ಏನಾದರೂ ಸಮಸ್ಯೆಗಳಿದ್ದಲ್ಲಿ ಮುಚ್ಚಳಿಕೆಯನ್ನು ಪಡೆದು ವೇತನ ನಿಗದೀಕರಣ ನೀಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚರ್ಚೆಯ ಮಧ್ಯೆ ಮಾತನಾಡಿದ ಕುಲಸಚಿವರು ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 75 ಯುಎನ್ಇ 2021 ದಿನಾಂಕ:25-10-2021 ನ್ನು ಸಭೆಯ ಗಮನಕ್ಕೆ ತರುತ್ತಾ ಸುತ್ತೋಲೆಯಲ್ಲಿ, ಪರಿನಿಯಮಗಳು ಎಲ್ಲಾ ವಿಶ್ವವಿದ್ಯಾಲಯಗಳಿಗೂ ಏಕಕಾಲಕ್ಕೆ ಸಾಮಾನ್ಯವಾಗಿ ಅನ್ವಯಿಸುವಂತಹ ಏಕರೂಪತೆಯನ್ನು ಹೊಂದಿರುವುದು ಅಗತ್ಯವಾಗಿರುತ್ತದೆ. ಆದರೆ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ, ಬೇರೆ ಬೇರೆ

ವಿಶ್ವವಿದ್ಯಾಲಯಗಳು ತಮ್ಮ ಇಷ್ಟಕ್ಕೆ ತಕ್ಕಂತೆ ಪರಿನಿಯಮಗಳನ್ನು ರಚಿಸಿಕೊಳ್ಳುತ್ತಿರುವುದನ್ನು ಸರ್ಕಾರವು ಅವಲೋಕಿಸಿದೆ. ಯು.ಜಿ.ಸಿ. ವಿನಿಯಮಗಳು, ಮಾನದಂಡ / ಮಾರ್ಗಸೂಚಿಗಳು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಉಪಬಂಧಗಳಿಗೆ ಸೇವಾ ನ್ಯಾಯಶಾಸ್ತ್ರ ಹಾಗೂ ಸರ್ಕಾರದ ಕಾರ್ಯನೀತಿಗೆ ಅನುಗುಣವಾಗಿರದ ಪರಿನಿಯಮಗಳಿಂದಾಗಿ ಎದುರಾಗುವ ಲೆಕ್ಕ ಪರಿಶೋಧನೆ ಆಕ್ಷೇಪಣೆ, ಕಾನೂನಾತ್ಮಕ ಜಟಿಲತೆ ಹಾಗೂ ಸಂದಿಗ್ಧ ಸನ್ನಿವೇಶಗಳಿಗೆ ವಿಶ್ವವಿದ್ಯಾಲಯಗಳ ಕುಲಪತಿಗಳು, ಕುಲಸಚಿವರು, ವಿತ್ತಾಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿ / ನೌಕರರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ನಿಯಮವನ್ನು ಪಾಲನೆ ಮಾಡುತ್ತಾ ಮುಂದುವರೆಯುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಜಿ., ಇವರು ಮಾತನಾಡಿ ಇಲ್ಲಿಯವರೆಗೂ ವೇತನ ನಿಗದೀಕರಣ ಮಾಡದೇ ಇರುವುದನ್ನು ಪ್ರಸ್ತಾಪಿಸುತ್ತಾ, ನಿಯಮಾನುಸಾರ ಷರತ್ತು ವಿಧಿಸಿ ಮತ್ತು Audit ಆಕ್ಷೇಪಣೆಯಾದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟು ಮುಂದುವರೆಯಲು ತಿಳಿಸಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ನೌಕರರಿಗೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ಷರತ್ತು ವಿಧಿಸಿ ಕೂಡಲೇ ನೀಡಬೇಕೆಂದು ಆಗ್ರಹಿಸಿದರು.

ಸದಸ್ಯರಾದ ಶ್ರೀ.ರಾಮಲಿಂಗಪ್ಪ ಹೆಚ್., ಇವರು ಮಾತನಾಡುತ್ತಾ, ರಾಜ್ಯಪಾಲರಿಂದ ಪರಿನಿಯಮದ ಅನುಮೋದನೆಯನ್ನು ಕಾಯ್ದಿರಿಸಿ ವೇತನ ನಿಗದೀಕರಣವನ್ನು ಮಾಡಲು ನಿಯಮಾನುಸಾರ ಮುಂದುವರೆಯಲು ತಿಳಿಸಿದರು. ಹಾಗೂ ಪ್ರಾಂಶುಪಾಲರ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಹಾಗೂ ವಿಶ್ವವಿದ್ಯಾಲಯದ ಹಂತದಲ್ಲಿ ಮಾರ್ಗಸೂಚಿಗಳನ್ನು ನೋಡಿಕೊಂಡು ಮುಂದುವರೆಯುವುದು ಸೂಕ್ತವೆಂದರು. ಇದಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಧ್ವನಿಗೂಡಿಸಿದರು. ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ಎಲ್ಲಾ ಬೋಧಕೇತರ ಬಡ್ತಿಗಳನ್ನು ನೀಡಲು ಆಗ್ರಹಿಸಿದರು. ಇದಕ್ಕೆ ಧ್ವನಿಗೂಡಿಸಿದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಸರ್ಕಾರದ ನಿಯಮಾವಳಿಗಳನ್ನು ಪರಿಶೀಲಿಸಿ ಮುಂದುವರೆಯಬೇಕೆಂದು ಆಗ್ರಹಿಸಿದರು.

ಕುಲಸಚಿವರು ಮಾತನಾಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ಅಧ್ಯಾಯ-iv ದ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ವಿಷಯದಲ್ಲಿ ಕ್ರಮ ಸಂಖ್ಯೆ 29, ಸಿಂಡಿಕೇಟ್ ನ ಅಧಿಕಾರಗಳನ್ನು ಸಭೆಯ ಗಮನಕ್ಕೆ ತರುತ್ತಾ, (3) (2) ನೇ ಉಪ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುದೇ ಭತ್ಯೆಗಳನ್ನು ಅಥವಾ ಉಪಲಬ್ಧಗಳನ್ನು ನೀಡುವ ಅಧಿಕಾರವನ್ನು ಸಿಂಡಿಕೇಟಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ ಎಂದರು.

ಅದಕ್ಕೆ ಪ್ರತಿಯಾಗಿ ಸಿಂಡಿಕೇಟ್ ಸದಸ್ಯರು ಎಲ್ಲಾ ನೌಕರರ ಬೇಡಿಕೆ ಅನುಸಾರ ಶಿಫಾರಸ್ಸು ಮಾಡಿದ್ದೇವೆ ಹೊರತು, ಸಿಂಡಿಕೇಟ್ ಅಧಿಕಾರದ ವ್ಯಾಪ್ತಿಯ ಅರಿವಿದೆ ಎಂದು ಹೇಳಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಅಧ್ಯಾಪಕೇತರ ನೌಕರರ ಹುದ್ದೆಗಳ ಉನ್ನತೀಕರಣ (Upgradation) ಪರಿನಿಯಮವನ್ನು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು. ಹಾಗೂ ವೇತನ ನಿಗದೀಕರಣ (Salary Fixation) ಪ್ರಕ್ರಿಯೆಯನ್ನು ಸೂಕ್ತ ಷರತ್ತುಗಳನ್ನು ವಿಧಿಸಿ ನಿಯಮಾನುಸಾರ ಮಂಜೂರು ಮಾಡುವ ಬಗ್ಗೆ ಸಭೆಯಲ್ಲಿ ನಿರ್ಣಯಿಸಲಾಯಿತು.

2021–ಸಿಂ–5.05: "DRAFT STATUTES TO SUPPLEMENT PROVISIONS FOR THE PROMOTION OF PROFESSOR (ACADEMIC LEVEL 14) TO SENIOR PROFESSOR (ACADEMIC LEVEL 15) IN THE "STATUTES RELATING TO DIRECT RECRUITMENT AND CAREER ADVANCEMENT SCHEME AND MISCELLANEOUS PROVISIONS TO IMPLEMENT THE REVISED UGC PAY SCALES TO TEACHERS, LIBRARIAN AND EQUIVALENT CADRE PERSONNEL OF KUVEMPU UNIVERSITY 2020" ಪರಿನಿಯಮದ ಅನುಮೋದನೆ ಕುರಿತು.

ಚರ್ಚೆ : ವಿಶ್ವವಿದ್ಯಾಲಯದಲ್ಲಿ ಹಿರಿಯ ಪ್ರಾಧ್ಯಾಪಕ ವೃಂದಕ್ಕೆ ವೃತ್ತಿ ಪದೋನ್ನತಿ ನೀಡುವುದಕ್ಕೆ ಸಂಬಂಧಿಸಿದಂತೆ ರಚಿತವಾದ ಪರಿನಿಯಮದ ಕುರಿತು ಸದಸ್ಯರಾದ ಪ್ರೊ. ವಿ. ಕೃಷ್ಣ ಇವರು ಸಭೆಗೆ ವಿವರಿಸಿದರು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.06: Statute Governing the Establishment of a Centre for Women studies in kuvempu University. ಪರಿನಿಯಮದ ಅನುಮೋದನೆ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, Statute Governing the Establishment of a Centre for Women studies in kuvempu University. ಪರಿನಿಯಮದ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರುಗಳಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ, ಶ್ರೀ ರಾಮಲಿಂಗಪ್ಪ ಹೆಚ್., ಹಾಗೂ ಶ್ರೀ ಧರ್ಮಪ್ರಸಾದ್ ಜಿ., ಇವರುಗಳು ಮಾತನಾಡುತ್ತಾ, ಮಹಿಳಾ ಅಧ್ಯಯನ ಕೇಂದ್ರದ ಕಾರ್ಯವ್ಯಾಪ್ತಿಯ ಕುರಿತು ಮಾಹಿತಿ ಕೇಳಿದರು. ಅಲ್ಲದೆ ಯು.ಜಿ.ಸಿ ಯಿಂದ ಅನುದಾನವನ್ನು ತರಿಸಲು ಕ್ರಮಕೈಗೊಂಡು ಮುಂದುವರೆಯುವುದು ಎಂದರು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.07: DRAFT STATUTE GOVERNING THE ESTABLISHMENT OF MAHAKAVI VALMIKI STUDY CENTRE AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.08: DRAFT STATUTE GOVERNING THE ESTABLISHMENT OF RASHTRA KAVI KUVEMPU STUDY CENTRE AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.09: DRAFT STATUTE GOVERNING THE ESTABLISHMENT OF THE CENTRE FOR GANDHIAN STUDIES AND RESEARCH AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.10: DRAFT STATUTE GOVERNING THE ESTABLISHMENT OF PROFESSOR B. KRISHNAPPA STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.11: DRAFT STATUTE GOVERNING THE ESTABLISHMENT OF ALLAMA PRABHU STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.12: DRAFT STATUTE GOVERNING THE ESTABLISHMENT OF KELADI RAANI CHANNAMMA STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.13: DRAFT STATUTE GOVERNING THE ESTABLISHMENT OF PADMABHUSHANA Dr. RAJKUMAR STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.14: DRAFT STATUTE GOVERNING THE ESTABLISHMENT OF SHARANE AKKAMAHADEVI STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.15: DRAFT STATUTES RELATING TO UPGRADATION OF THE POST OF DRAFTSMAN AS SENIOR DRAFTSMAN PERSONAL TO THE INCUMBENT EMPLOYEE OF KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–5.15(ಎ): ಸ್ನಾತಕೋತ್ತರ ಸಮಾಜಕಾರ್ಯ (ಎಂ.ಎಸ್.ಡಬ್ಲ್ಯೂ) ಅಧ್ಯಯನ ಮಂಡಳಿಯ ರಚನೆಯನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ : ಸ್ನಾತಕೋತ್ತರ ಸಮಾಜಕಾರ್ಯ (ಎಂ.ಎಸ್.ಡಬ್ಲ್ಯೂ) ಅಧ್ಯಯನ ಮಂಡಳಿಯನ್ನು ಪುನರ್ ರಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

2021–ಸಿಂ–5.15(ಬಿ): DRAFT STATUTE RELATING TO THE ESTABLISHMENT OF CENTRE FOR ONLINE EDUCATION (COE) ಪರಿನಿಯಮದ ಅನುಮೋದನೆ ಕುರಿತು.

ಚರ್ಚೆ: ಸದರಿ ಪರಿನಿಯಮದ ಅನುಮೋದನೆ ಕುರಿತಂತೆ, ಸಿಂಡಿಕೇಟ್ ಸದಸ್ಯರು ಎಷ್ಟು ಕೋರ್ಸುಗಳು ಯು.ಜಿ.ಸಿ.ಯಿಂದ ಅನುಮೋದನೆಗೊಂಡಿರುತ್ತವೆ ಎಂಬ ಬಗ್ಗೆ ಮಾಹಿತಿಯನ್ನು ಕೋರಿದರು. ಕುಲಸಚಿವರು ವಿಸ್ತಾರವಾಗಿ ಮಾತನಾಡಿ, ಯು.ಜಿ.ಸಿ. ಮಾರ್ಗಸೂಚಿಗಳನ್ವಯ ದೂರ ಶಿಕ್ಷಣ ನಿರ್ದೇಶನಾಲಯದ ಮೂಲಕ 12 ಆನ್-ಲೈನ್ ಕೋರ್ಸುಗಳನ್ನು ಪ್ರಾರಂಭ ಮಾಡಿರುವುದಾಗಿ ತಿಳಿಸಿದರು. ಹಾಗೂ ಎಲ್ಲಾ ಕೋರ್ಸುಗಳ ವಿವರಗಳನ್ನು ಸಭೆಯ ಗಮನಕ್ಕೆ ತಂದರು.

ನಿರ್ಣಯ : ಚರ್ಚೆಯ ನಂತರ ಪ್ರಸ್ತಾವನೆಯಲ್ಲಿನ ಪರಿನಿಯಮವನ್ನು ಅನುಮೋದಿಸಲಾಯಿತು.

## ಪರೀಕ್ಷಾ ವಿಭಾಗ

**2021-ಸಿಂ-5.16:** ದಿನಾಂಕ:05-08-2021 ಹಾಗೂ ದಿನಾಂಕ:06-08-2021 ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ ಕುರಿತು.

ನಿರ್ಣಯ : ಚರ್ಚೆಯ ನಂತರ ದಿನಾಂಕ:05-08-2021 ಹಾಗೂ ದಿನಾಂಕ:06-08-2021 ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

**2021-ಸಿಂ-5.17:** ಅವಧಿ ಪೂರ್ಣಗೊಳಿಸಿದ (Double the Duration) ಡಿಪ್ಲೊಮಾ / ಸ್ನಾತಕ / ಸ್ನಾತಕೋತ್ತರ ಮತ್ತು ದೂರಶಿಕ್ಷಣ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**2021-ಸಿಂ-5.18:** ದಿನಾಂಕ:06-09-2021 ರಂದು ನಡೆದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ದಿನಾಂಕ:06-09-2021 ರಂದು ನಡೆದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

**2021-ಸಿಂ5.18(ಎ):** M/s KEONICS Bangalore – ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸುವ ಸಂಬಂಧ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುತ್ತಿರುವ ಕುರಿತು

ಚರ್ಚೆ : ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು (ಪರೀಕ್ಷಾಂಗ) ರವರು M/s KEONICS Bangalore – ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸುವ ಸಂಬಂಧ ದಿನಾಂಕ:13-10-2021ರ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಚರ್ಚೆಯ ನಂತರ ಅದನ್ನು ಇನ್ನೊಮ್ಮೆ ಪರಿಶೀಲಿಸಿ ವಿವರಗಳೊಂದಿಗೆ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಗಿತ್ತು. ಹಾಗೂ ಈ ಸಂಬಂಧ ಮುಂಗಡ ಪಾವತಿಸದಿರಲು ನಿರ್ಣಯಿಸಲಾಗಿತ್ತು ಈ ಹಿನ್ನೆಲೆಯಲ್ಲಿ EDGS ಜಾರಿಗೊಳಿಸುವ ಬಗ್ಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಸಭೆಗೆ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ, ಪ್ರತಿ ವಿದ್ಯಾರ್ಥಿಗೆ ರೂ.132 ಹಾಗೂ ಇದರೊಂದಿಗೆ ಜಿ.ಎಸ್.ಟಿ. ಪಡೆಯಬೇಕೆಂದು ಹಿಂದಿನ ಕುಲಸಚಿವರು (ಮೌಲ್ಯಮಾಪನ) ಇವರು ಚರ್ಚಿಸಿದ್ದರು, ಅಂತಿಮವಾಗಿ ರೂ.132/-

(ಜಿ.ಎಸ್.ಟಿ. ಸೇರಿಕೊಂಡು) ರಂತೆ ಒಪ್ಪಂದ ಮಾಡಿಕೊಳ್ಳಬಹುದು ಇದನ್ನು ಈಗಾಗಲೇ ಸಂಗ್ರಹಿಸಿರುವ ಪರೀಕ್ಷ ಶುಲ್ಕದಲ್ಲಿ ಭರಿಸಬಹುದೆಂದು ಚರ್ಚಿಸಲಾಗಿತ್ತು. ಶುಲ್ಕವು ಹೆಚ್ಚಾಗಿದ್ದು, ಇದರ ಬಗ್ಗೆ ನನ್ನ ತೀವ್ರವಾದ ಆಕ್ಷೇಪಣೆ ಇರುತ್ತದೆ. ಇದಕ್ಕೆ ನನ್ನಅನುಮತಿ ಇಲ್ಲವೆಂದು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರು ಮಾತನಾಡಿ ರೂ.132/-(ಜಿ.ಎಸ್.ಟಿ. ಸೇರಿಕೊಂಡು) ಇದು ಪ್ರತಿ ವಿದ್ಯಾರ್ಥಿಗೆ ಹಾಗೂ ಪ್ರತಿ ಸೆಮಿಸ್ಟರ್‌ಗೆ ಎಂದು ಹೇಳಿದರು. ಮಾನ್ಯ ಕುಲಪತಿಗಳು ಮಾತನಾಡಿ ಪ್ರಸ್ತುತ ಗ್ಲೋಬಲೈಷೇನ್ ಯುಗದಲ್ಲಿ ಇದು ಅಗತ್ಯವಾಗಿರುವುದರಿಂದ ಮುಂದುವರೆಸುವುದು ಸೂಕ್ತ ಎಂದರು. ಆಗ ಸದಸ್ಯರುಗಳಾದ ಶ್ರೀ ಧರ್ಮಪ್ರಸಾದ್ ಜಿ., ಶ್ರೀ ರಾಮಲಿಂಗಪ್ಪ ಹೆಚ್., ಶ್ರೀ ಎನ್. ಆರ್. ಮಂಜುನಾಥ್, ಹಾಗೂ ಶ್ರೀ ಬಿ. ನಿರಂಜನಮೂರ್ತಿಯವರು ಇದನ್ನು ಅನುಮತಿಸುವ ಮುಂಚೆ ಎಲ್ಲಾ MOU Terms & conditions ಪರಿಶೀಲಿಸಬೇಕಾಗುತ್ತದೆ. ಈ ಮುಂದಿನ ಆಗು-ಹೋಗುಗಳಿಗೆ ವಿಶ್ವವಿದ್ಯಾಲಯವೇ ಜವಾಬ್ದಾರಿಯಾಗುವುದರಿಂದ ಕುಲಸಚಿವ(ಮೌಲ್ಯಮಾಪನ)ರವರು ಮತ್ತು ಮಾನ್ಯ ಕುಲಪತಿಯವರು ಸರಿಯಾಗಿ ಸವಿಸ್ತಾರವಾಗಿ ಪರಿಶೀಲನೆ ಮಾಡುವಂತೆ ಸಭೆಯು ಸೂಚಿಸಿತು. ಹಾಗೂ ಒಂದು ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಮಾಡಿ ನಂತರ ಮರುಪರಿಶೀಲನೆ ಮಾಡಿ ಮುಂದಿನ ವರ್ಷಕ್ಕೆ ಮುಂದುವರೆಸಬೇಕೇ ಅಥವಾ ಬೇಡವೇ ಎಂದು ತೀರ್ಮಾನಿಸಬಹುದು ಎಂದೂ ಚರ್ಚಿಸಲಾಯಿತು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಈ ವಿಷಯದ ಕುರಿತು ಒಮ್ಮತವಾದ ಅಂತಿಮ ನಿರ್ಣಯಕ್ಕೆ ಬರಲು ಸಾಧ್ಯವಾಗದ ಕಾರಣ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಯಿತು.

**2021-ಸಿಂ5.18(ಬಿ):** ದಿನಾಂಕ:13-08-2021 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಖರೀದಿಗೆ ಸಂಬಂಧಪಟ್ಟ ಟೆಂಡರ್ ಅನುಮೋದನೆ ಕುರಿತ ನಿರ್ಣಯದ ಧೃಡೀಕರಣ ಕುರಿತು.

**ಚರ್ಚೆ :** ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ಮಾತನಾಡುತ್ತಾ, ಟೆಂಡರ್ ಪ್ರತಿಯನ್ನು ಸರಿಯಾಗಿ ಪರಿಶೀಲನೆ ಮಾಡಲು ತಿಳಿಸಿದಾಗ ಕುಲಸಚಿವರು (ಮೌಲ್ಯಮಾಪನ) ರವರು ಸಂಕ್ಷಿಪ್ತವಾಗಿ ವಿವರಿಸಿದರು.

ನಿರ್ಣಯ : ಚರ್ಚೆಯ ನಂತರ ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಖರೀದಿಗೆ ಸಂಬಂಧಪಟ್ಟ ಹಿಂದಿನ ಟೆಂಡರ್ ಅವಧಿಯು ದಿನಾಂಕ:20-02-2021ಕ್ಕೆ ಮುಗಿದಿದ್ದು, ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರದೇ ಇರುವುದರಿಂದ ನಿಯಮಾನುಸಾರ ಹೊಸ ಟೆಂಡರ್ ಅನುಮೋದನೆಯಾಗುವವರೆಗೂ ಈ ಹಿಂದಿನ ಟೆಂಡರ್‌ದಾರರಿಂದಲೇ ಉತ್ತರ ಪತ್ರಿಕೆಗಳನ್ನು ಖರೀದಿಸಲು ಸಭೆಯು ಅನುಮತಿ ನೀಡಿತು.

## ಶೈಕ್ಷಣಿಕ ವಿಭಾಗ

**2021-ಸಿಂ-5.19:** ಅಥೆನ್ಸ್ ವಿಶ್ವವಿದ್ಯಾಲಯ ಆಲಬಾಮ ಮತ್ತು ಕುವೆಂಪು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ (MOU) ಸಹಯೋಗದೊಂದಿಗೆ ಮಾಡಿಕೊಳ್ಳುವ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಅಥೆನ್ಸ್ ವಿಶ್ವವಿದ್ಯಾಲಯ ಆಲಬಾಮ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಕುವೆಂಪು ವಿಶ್ವವಿದ್ಯಾಲಯವು ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಒಡಂಬಡಿಕೆ (MOU) ಮಾಡಿಕೊಳ್ಳಲು ಸಭೆಯು ಅನುಮತಿ ನೀಡಿತು.

**2021–ಸಿಂ5.19(ಎ):** "ಅಮಿತ್‌ರಾಜ್ ಪಿ. ಜಿಂಗಡೆ s/o ಹೆಚ್.ಕೆ. ವಿಜಯ ಕುಮಾರಿ ಮೆಮೋರಿಯಲ್ ಗೋಲ್ಡ್‌ಮೆಡಲ್" – ಇವರ ಹೆಸರಿನಲ್ಲಿ ದತ್ತಿನಿಧಿ ಸ್ಥಾಪನೆ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಶ್ರೀಮತಿ ಹೆಚ್. ಕೆ. ವಿಜಯಕುಮಾರಿ, ಜಿ. ಪ್ರಹ್ಲಾದ್ ರಾವ್ ವಿಜಯಶ್ರೀ ನಿಲಯ, 4ನೇ ತಿರುವು ಅಶೋಕ ನಗರ, ಶಿವಮೊಗ್ಗ – ಇವರು "ಅಮಿತ್ ರಾಜ್ ಪಿ. ಜಿಂಗಾಡೆ, s/o ಹೆಚ್.ಕೆ. ವಿಜಯಕುಮಾರಿ ಮಮೋರಿಯಲ್ ಗೋಲ್ಡ್ ಮೆಡಲ್" ಇವರ ಹೆಸರಿನಲ್ಲಿ ಶಿಕ್ಷಣ ನಿಕಾಯದ ಬಿ.ಪಿ.ಇಡಿ., ಅಧ್ಯಯನ ವಿಷಯದಲ್ಲಿ (ರೆಗ್ಯೂಲರ್) ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿ ದತ್ತಿನಿಧಿ ಸ್ವರ್ಣಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2021–ಸಿಂ–5.19(ಬಿ):** ಕೆಳದಿ ವಸ್ತು ಸಂಗ್ರಹಾಲಯ & ಇತಿಹಾಸ ಸಂಶೋಧನಾಲಯ ಕೇಂದ್ರಕ್ಕೆ ಪ್ರವೇಶ ಶುಲ್ಕ ನಿಗಧಿಪಡಿಸುವ ಬಗ್ಗೆ.

ಚರ್ಚೆ : ಕುಲಸಚಿವರು ಪ್ರಸ್ತಾವನೆಯನ್ನು ಮಂಡಿಸಿ ಮಾತನಾಡಿ ಕೆಳದಿ ವಸ್ತು ಸಂಗ್ರಹಾಲಯ & ಇತಿಹಾಸ ಸಂಶೋಧನಾಲಯ ಕೇಂದ್ರದ ನಿರ್ವಹಣೆಗಾಗಿ ಸದರಿ ಕೇಂದ್ರಕ್ಕೆ ಪ್ರವೇಶ ಶುಲ್ಕ ನಿಗಧಿಪಡಿಸುವ ಕುರಿತು ಚರ್ಚೆಗಾಗಿ ವಿಷಯ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡುತ್ತಾ, ಪ್ರವೇಶ ಶುಲ್ಕವನ್ನು ವಯಸ್ಕರಿಗೆ ರೂ.10 ಮತ್ತು ಮಕ್ಕಳಿಗೆ ರೂ.05 ನಿಗದಿಪಡಿಸಿ ಮ್ಯೂಸಿಯಂನ ಗುಣಮಟ್ಟ ಮತ್ತು ಪ್ರಾಮುಖ್ಯತೆ ನೀಡುವುದು ಉತ್ತಮವೆಂದರು.

ಸದಸ್ಯರಾದ ಶ್ರೀಬಳ್ಳೇಕೆರೆ ಸಂತೋಷ್ ಇವರು ಮಾತನಾಡುತ್ತಾ, ಅಲ್ಲಿರುವ ಸಿಬ್ಬಂದಿಗಳ ಬಗ್ಗೆ ದೂರುಗಳು ಇರುವುದರಿಂದ ಆದಷ್ಟು ಬೇಗ ಸರಿಪಡಿಸಿ ಕೆಳದಿಯನ್ನು ಒಂದು ಮಾದರಿ ಮ್ಯೂಸಿಯಂ ಮಾಡಬಹುದು ಹಾಗೂ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆ ಕೈಗೊಳ್ಳಲು ಮತ್ತು ಎನ್.ಎಸ್.ಎಸ್., ಘಟಕದವರು ಭೇಟಿ ಮಾಡಿ ಅಲ್ಲಿಯೇ ಕ್ಯಾಂಪ್ ನಡೆಸಲು ಕ್ರಮಕೈಗೊಳ್ಳಬೇಕೆಂದರು.

ನಿರ್ಣಯ : ಚರ್ಚೆಯ ನಂತರ ಮ್ಯೂಸಿಯಂಗೆ ಭೇಟಿ ನೀಡಲು ಪ್ರವೇಶ ಶುಲ್ಕವನ್ನು ವಯಸ್ಕರಿಗೆ ರೂ.10/– ಹಾಗೂ ಮಕ್ಕಳಿಗೆ ರೂ.05/– ರಂತೆ ನಿಗದಿಪಡಿಸಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2021–ಸಿಂ–5.19(ಸಿ):** ವೃತ್ತಿ ಪದೋನ್ನತಿ (C.A.S) ಸಂಬಂಧದ ನೇಮಕಾತಿ ಮಂಡಳಿ ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ಚರ್ಚೆ :** ದಿನಾಂಕ:30-09-2021 ಮತ್ತು ದಿನಾಂಕ:08-10-2021 ರಂದು ನಡೆದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವೃತ್ತಿ ಪದೋನ್ನತಿಗಾಗಿ ನಡೆದ ನೇಮಕಾತಿ ಮಂಡಳಿಗಳ ಸಭೆಯ ನಡಾವಳಿಗಳ ಮುಚ್ಚಿದ ಲಕೋಟೆಗಳನ್ನು ಕುಲಸಚಿವರು ಸಭೆಯಲ್ಲಿ ತೆರೆದು ಸಭೆಯ ಗಮನಕ್ಕೆ ತಂದರು. ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಜಿ. ಇವರು ಮಾತನಾಡುತ್ತಾ, ಈಗಾಗಲೇ ನಡೆದಿರುವ ವೃತ್ತಿಪದೋನ್ನತಿಯ ಸಂಬಂಧದ ಆದೇಶಗಳನ್ನು ತಕ್ಷಣ ನೀಡುವುದು ಮತ್ತು ಯಾರಾದರೂ ವೃತ್ತಿ ಪದೋನ್ನತಿಗೆ ಅರ್ಜಿ ಸಲ್ಲಿಸಿದಲ್ಲಿ ಅದನ್ನು ನವಂಬರ್ 2021 ರೊಳಗೆ ಎಲ್ಲಾ ವೃತ್ತಿಪದೋನ್ನತಿಯ ನೇಮಕಾತಿ ಮಂಡಳಿಗಳ ಸಭೆಯ ದಿನಾಂಕಗಳನ್ನು ನಿಗದಿಪಡಿಸಿ ಸಿ.ಎ.ಎಸ್., ಅನ್ನು ಕಾಲಕಾಲಕ್ಕೆ ತಕ್ಷಣ ನೀಡುವಂತೆ ಆಗ್ರಹಿಸಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡುತ್ತಾ, ಯಾರಾದರೂ ಸಿ.ಎ.ಎಸ್., ಗೆ ಅರ್ಜಿ ಸಲ್ಲಿಸಿದರೆ ಆದ್ಯತೆಯ ಮೇರೆಗೆ ಪರಿಗಣಿಸುವುದೆಂದರು.

C.A.S., ನಲ್ಲಿ ಬಡ್ತಿ ಹೊಂದಿದ ಅಧ್ಯಾಪಕರಿಗೆ ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯ ನೀಡಬೇಕೆಂದು ಅಧ್ಯಾಪಕರು ಕೋರುತ್ತಿದ್ದು, ಇದನ್ನು ಪರಿಗಣಿಸಬೇಕೆಂದು ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ಮತ್ತು ಶ್ರೀ ರಾಮಲಿಂಗಪ್ಪರವರು ಕೋರಿದರು. ನಂತರ ಇದಕ್ಕೆ ಉತ್ತರಿಸಿದ ಕುಲಸಚಿವರು ಪರಿನಿಯಮವು ಕುಲಾಧಿಪತಿಗಳಿಂದ ದಿನಾಂಕ:19-03-2021 ರಂದು ಅನುಮೋದನೆ ಗೊಂಡಿದ್ದು, ಈ ದಿನಾಂಕದಿಂದ ಮಾತ್ರ ನೀಡಲು ನಿಯಮಗಳಲ್ಲಿ ಅವಕಾಶವಿರುತ್ತದೆ ಎಂದು ತಿಳಿಸಿದರು. ಅಗತ್ಯವಿದ್ದಲ್ಲಿ ಈ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಪಡೆಯಲಾಗುವುದೆಂದು ತಿಳಿಸಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ್‌ರವರು ಮಾತನಾಡುತ್ತಾ, ವೃತ್ತಿ ಪದೋನ್ನತಿಯಲ್ಲಿ ಅಧ್ಯಾಪಕರು ಅರ್ಹತೆಯ ಮೇಲೆ ಗಳಿಸುವ ಅಂಕಗಳು ಮತ್ತು ಹೆಚ್ಚಿನ ಗುಣಮಟ್ಟಕ್ಕೆ ಒತ್ತು ಕೊಡುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡುತ್ತಾ, ಬೋಧಕರುಗಳಿಗೆ ಅವರ ಅರ್ಹತಾ ದಿನಾಂಕಗಳಿಗನುಗುಣವಾಗಿ ಕಾಲಕಾಲಕ್ಕೆ ವೃತ್ತಿ ಪದೋನ್ನತಿಗಳನ್ನು ನೀಡುವುದರಿಂದ ಅವರ ವೃತ್ತಿಯಲ್ಲಿ ಇನ್ನೂ ಹೆಚ್ಚಿನ ಕಾರ್ಯಕ್ಷಮತೆಯಿಂದ ಕರ್ತವ್ಯದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಿದಂತಾಗುತ್ತದೆ. ಆದ್ದರಿಂದ ಎಲ್ಲರ ವೃತ್ತಿಪದೋನ್ನತಿಯನ್ನು ನವಂಬರ್‌ನಲ್ಲಿ ಮಾಡುವುದು ಎಂದರು.

**ನಿರ್ಣಯ :** ಸುಧೀರ್ಘ ಚರ್ಚೆಯ ನಂತರ ದಿನಾಂಕ:30-09-2021 ಮತ್ತು ದಿನಾಂಕ:08-10-2021 ರಂದು ನಡೆದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳ ವೃತ್ತಿ ಪದೋನ್ನತಿ ಸಂಬಂಧ ನಡೆದ ನೇಮಕಾತಿ ಮಂಡಳಿ ಸಭೆಗಳ (B.O.A.) ನಡಾವಳಿಗಳನ್ನು ಅನುಮೋದಿಸಿ ಯುಜಿಸಿ/ರಾಜ್ಯ ಸರ್ಕಾರಗಳ ನಿಯಮಾನುಸಾರ ಅರ್ಹತಾ ದಿನಾಂಕಗಳನ್ನು ನಿಗದಿಗೊಳಿಸಲು ನಿರ್ಣಯಿಸಲಾಯಿತು., ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯ ಪಾವತಿಸುವ ಕುರಿತಂತೆ ಸರ್ಕಾರದೊಂದಿಗೆ ಈಗಾಗಲೇ ಪತ್ರ ವ್ಯವಹರಿಸಿದ್ದು, ಇನ್ನೊಂದು ಬಾರಿ ಸ್ಪಷ್ಟೀಕರಣ ಪಡೆಯಲು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು

**2021-ಸಿಂ-5.19(ಡಿ):** ಶ್ರೀ ವಿದ್ಯಾಶಂಕರ್ ಎಂ.ಹೆಚ್., ಸಹಾಯಕ ಪ್ರಾಧ್ಯಾಪಕರು, ಕಂಪ್ಯೂಟರ್ ಸೈನ್ಸ್ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ - ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಕುರಿತು.

ಚರ್ಚೆ : ಕುಲಸಚಿವರು ಪ್ರಸ್ತಾವನೆಯನ್ನು ಮಂಡಿಸಿ ಮಾತನಾಡುತ್ತಾ, ಶ್ರೀ ವಿದ್ಯಾಶಂಕರ್ ಎಂ.ಹೆಚ್. ಸಹಾಯಕ ಪ್ರಾಧ್ಯಾಪಕರು, ಕಂಪ್ಯೂಟರ್ ಸೈನ್ಸ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ – ಇವರು ಮಗಧ ವಿಶ್ವವಿದ್ಯಾಲಯ, ಬೋಧ್ ಗಯಾ, ಬಿಹಾರ್ – ಇಲ್ಲಿಂದ ಸುಳ್ಳು ಪಿಹೆಚ್. ಡಿ ಪ್ರಮಾಣ ಪತ್ರ ಪಡೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಬಗ್ಗೆ ಬಂದಿರುವ ದೂರಿನನ್ವಯ ಮಗಧ ವಿಶ್ವವಿದ್ಯಾಲಯದಲ್ಲಿ ಸತ್ಯ ಶೋಧನೆಗಾಗಿ ಅಧಿಕಾರಿಗಳನ್ನು ನೀಯೋಜಿಸಿ ವಿವರ ತರಿಸಲಾಗಿದ್ದು, ಸದರಿ ವಿಶ್ವವಿದ್ಯಾಲಯದಿಂದ ಆಪಾದಿತರಿಗೆ ಯಾವುದೇ ಪಿಹೆಚ್.ಡಿ ಪ್ರಮಾಣಪತ್ರ ವಿತರಿಸಿರುವುದಿಲ್ಲ ಎಂದು ಮಾಹಿತಿ ನೀಡಲಾಗಿರುತ್ತದೆ. ಈಗಾಗಲೇ ವಿಶ್ವವಿದ್ಯಾಲಯದ ಹಂತದಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಈ ಮಧ್ಯೆ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟವರ ವಿರುದ್ಧ ಕೂಡಲೇ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಚಿಸಿರುತ್ತದೆ. ಈ ಸಂಬಂಧ ಈ ಕೆಳಕಂಡ ಪತ್ರಗಳು ಬಂದಿರುತ್ತವೆ.

1. ಸರ್ಕಾರದ ಉಪಕಾರ್ಯದರ್ಶಿಗಳ ಪತ್ರ ಸಂಖ್ಯೆ:ಇಡಿ 33 ಯುಎಸ್‌ವಿ 2018 ದಿ:08-09-2020 ಈ ಪತ್ರದಲ್ಲಿ ಈ ಪ್ರಕರಣವು 31-03-2017ಕ್ಕೆ ಅಂತ್ಯಕ್ಕೆ ಪ್ರಕಟವಾದ ಮಹಾಲೇಖಪಾಲರ ವರದಿಯ
2. ಕಂಡಿಕೆ 4.1 ರಲ್ಲಿ ನಮೂದಾಗಿ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಚರ್ಚಿಸಲಾಗುತ್ತಿದೆ ಎಂದಿದೆ.
3. ಸರ್ಕಾರದ ಪತ್ರ ಸಂಖ್ಯೆ:ಇಡಿ 58 ಯುಎಸ್‌ವಿ 2020 ದಿನಾಂಕ: 22-02-2021
4. ಸರ್ಕಾರದ ಪತ್ರ ಸಂಖ್ಯೆ:ಇಡಿ 58 ಯುಎಸ್‌ವಿ 2020 ದಿನಾಂಕ: 12-07-2021

ಮೇಲ್ಕಂಡ ಪತ್ರಗಳಲ್ಲಿ ಸದರಿ ಪ್ರಕರಣವು ಕ್ರಿಮಿನಲ್ ಸ್ವರೂಪದ್ದಾಗಿದ್ದು, ಸದರಿಯವರ ಮೇಲೆ ಕ್ರಮಕೈಗೊಳ್ಳಲು ವಿಳಂಭ ಧೋರಣೆ ಅನುಸರಿಸುತ್ತಿರುವುದು ಹಾಗೂ ಇಲಾಖಾ ವಿಚಾರಣೆ ಪ್ರಕ್ರಿಯೆ ನಿಧಾನಗೊಳಿಸಿ ವೇತನ ಮತ್ತು ಇತರೆ ಭತ್ಯೆಗಳನ್ನು ವಿಸ್ತರಿಸುತ್ತಾ ಸದರಿಯವರಿಗೆ ಅನುಕೂಲ ಮಾಡಿಕೊಡುತ್ತಿರುವುದಾಗಿ ತಿಳಿಸಿ ಈ ಪ್ರಕರಣವನ್ನು ಪರಿವೀಕ್ಷಣೆ ನಡೆಸಲು ಮಾನ್ಯ ಕುಲಾಧಿಪತಿಗಳಿಗೆ ಏಕೆ ಶಿಫಾರಸ್ಸು ಮಾಡಬಾರದು ಅಥವಾ ಕ್ರಿಮಿನಲ್ ಮೊಕದ್ದಮೆ ದಾಖಲಿಸಬಾರದು ಎಂಬುದರ ಬಗ್ಗೆ ವಿವರಣೆ ಕೋರಿರುತ್ತಾರೆ. ಹಾಗೂ ವಿಶ್ವವಿದ್ಯಾಲಯವು ತೆಗೆದುಕೊಳ್ಳುತ್ತಿರುವ ನಿಲುವುಗಳಿಂದ ಸರ್ಕಾರಕ್ಕೆ ಹಾಗೂ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟಾಗುತ್ತಿರುವುದರಿಂದ ವಿಶ್ವವಿದ್ಯಾಲಯದ ಆಡಳಿತ ವಿಫಲತೆಯ ಬಗ್ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಪ್ರಕರಣ 8(1)ರಡಿ ಕ್ರಮಕೈಗೊಳ್ಳಲು ಪರಿಶೀಲಿಸಲಾಗುವುದು ಎಂದು ತಿಳಿಸಿರುತ್ತಾರೆ.

ಅಲ್ಲದೆ, ಇದಕ್ಕೆ ಸಂಬಂಧಿಸಿದಂತೆ ದಿನಾಂಕ: 12-10-2021ರಂದು ನಡೆದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸಭೆಯ ಪೂರ್ವಭಾವಿ ಸಭೆಯು ದಿನಾಂಕ: 11-10-2021ರಂದು ನಡೆದಿದ್ದು ಸದರಿ ಸಭೆಗೆ ಕುಲಸಚಿವರು ಹಾಗೂ ಮಾನ್ಯ ಕುಲಪತಿಗಳು ಕಡ್ಡಾಯವಾಗಿ ಹಾಜರಾಗುವಂತೆ ತಿಳಿಸಿದ್ದರಿಂದ, ಸದರಿ ಸಭೆಗೆ ಭಾಗವಹಿಸಲಾಗಿತ್ತು. ನಂತರ ದಿನಾಂಕ: 26-10-2021ರಂದು ಪುನ: ಸಭೆ ನಡೆದಿದ್ದು, ಸದರಿ ಸಭೆಗೆ ಮಾನ್ಯ ಕುಲಪತಿಗಳು ಭಾಗವಹಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತಾ ಈ ಕುರಿತು ತುರ್ತಾಗಿ ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂದು ಸಭೆಗೆ ವಿವರಿಸಿದರು.

ಸದಸ್ಯರಾದ ಶ್ರೀ. ರಾಮಲಿಂಗಪ್ಪ ಹೆಚ್. – ಇವರು ಮಾತನಾಡುತ್ತಾ,

ಸದರಿಯವರು ಕಂಪ್ಯೂಟರ್ ಸೈನ್ಸ್, ಎಂ.ಟೆಕ್ ಆಧಾರದ ಮೇಲೆ ಮಾತ್ರ ನೇಮಕಾತಿ ಹೊಂದಿದ್ದು, ಪಿಹೆಚ್.ಡಿ., ಪ್ರಮಾಣಪತ್ರವನ್ನು ಏಕೆ ಸಲ್ಲಿಸಿರುತ್ತಾರೆ ಎಂದು ಕೇಳಿದರು. ಸದಸ್ಯರಾದ ಶ್ರೀ ಬಿ. ನಿರಂಜನ್‌ಮೂರ್ತಿಯವರು ಮಾತನಾಡುತ್ತಾ, ಪಿಹೆಚ್.ಡಿ ಕಡ್ಡಾಯವಿಲ್ಲ ಎಂದಿದ್ದರೆ ಪಿಹೆಚ್.ಡಿ ಪ್ರಮಾಣ ಪತ್ರ ಏಕೆ ಸಲ್ಲಿಸಿದ್ದಾರೆಂದು ತಿಳಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡುತ್ತಾ, ಈಗಾಗಲೇ ಪ್ರೊ. ಜೆ. ಕೇಶವಯ್ಯ ಇವರು ಇಲಾಖಾ ವಿಚಾರಣೆ ನಡೆಸಿ ನೀಡಿರುವ ವರದಿಯ ಬಗ್ಗೆ ಕೇಳಿದಾಗ ಕುಲಸಚಿವರು, ಪ್ರೊ. ಜೆ. ಕೇಶವಯ್ಯರವರ ವಿಚಾರಣಾ ವರದಿಯಲ್ಲಿ ಅಧಿಕೃತ ದಾಖಲಾತಿ ಬಂದಿರುವ ಬಗ್ಗೆ ಗೊಂದಲ ಇರುವ ಹಿನ್ನಲೆಯಲ್ಲಿ ಮಾಹಿತಿಯ ಸತ್ಯಾಸತ್ಯತೆ / ನೈಜತೆ ಮತ್ತು ಮಾನ್ಯತೆ ಬಗ್ಗೆ ಸಮಿತಿಗೆ ಸ್ಪಷ್ಟ ನಿರ್ಣಯಕ್ಕೆ ಬರಲು ಸಾದ್ಯವಾಗದ ಕಾರಣ ಮಗಧ ವಿಶ್ವವಿದ್ಯಾನಿಲಯದಿಂದ ಶ್ರೀ ವಿದ್ಯಾಶಂಕರ್ ಎಂ.ಹೆಚ್ ಇವರು ಪಡೆದಿರುವ ಪಿ.ಹೆಚ್.ಡಿ., ಪ್ರಮಾಣ ಪತ್ರದ ನೈಜತೆ ಬಗ್ಗೆ ಪರಿಶೀಲಿಸಲು ಸೂಕ್ತ ಕ್ರಮಕೈಗೊಳ್ಳಬಹುದು ಎಂದು ಅಭಿಪ್ರಾಯಪಟ್ಟಿರುತ್ತಾರೆ ಎಂದು ತಿಳಿಸಿದರು.

ತದನಂತರ, ಶ್ರೀ ಧರ್ಮಪ್ರಸಾದ್ ಜಿ. ರವರು ನಿವೃತ ನ್ಯಾಯಧೀಶರಾದ ಶ್ರೀ ಟಿ.ಜಿ. ಚನ್ನಬಸಪ್ಪ ಇವರಿಂದ ಇಲಾಖಾ ವಿಚಾರಣಾ ವರದಿಯು ಬಂದಿರುವ ಬಗ್ಗೆ ಕೇಳಿದರು. ಈ ಕುರಿತು ಕುಲಸಚಿವರು ವರದಿ ಬರಬೇಕಾಗಿದೆಯೆಂದು ತಿಳಿಸಿದರು.

ಶ್ರೀ ವಿದ್ಯಾಶಂಕರ್ ಎಂ.ಹೆಚ್., ಅವರು ಮಗಧ ವಿಶ್ವವಿದ್ಯಾನಿಲಯದಿಂದ ಪಿ.ಹೆಚ್.ಡಿ ಪ್ರಮಾಣಪತ್ರವ ಪಡೆದಿದ್ದು, ಸದರಿಯವರ ತಪ್ಪಿಲ್ಲವೆಂದು ಶ್ರೀ ಧರ್ಮಪ್ರಸಾದ್ ಜಿ. ರವರು ಹೇಳಿದರು ಅದಕ್ಕೆ ಕುಲಸಚಿವರು ಅಭ್ಯರ್ಥಿಯು ಯಾವುದೇ ದೂರು ಸಲ್ಲಿಸಿರುವುದಿಲ್ಲವೆಂದು ತಿಳಿಸಿದರು ಆಗ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಎಂ.ಟೆಕ್., ಪದವಿ ಆಧಾರದ ಮೇಲೆ ನೇಮಕಾತಿ ಹೊಂದಿರುವುದರಿಂದ ದೂರು ಕೊಟ್ಟಿರುವುದಿಲ್ಲ ಹಾಗೂ ಪಿಹೆಚ್.ಡಿ., ಪ್ರಮಾಣ ಪತ್ರವನ್ನು ಸದರಿಯವರು ಬೆಂಗಳೂರಿನ ಅಧ್ಯಾಯನ ಕೇಂದ್ರದ ಮುಖಾಂತರ ಮಗಧ ವಿಶ್ವವಿದ್ಯಾಲಯದಿಂದ ಪಡೆದಿರುವುದರಿಂದ ತೊಂದರೆಯಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡುತ್ತಾ, ನೇಮಕಾತಿಗೆ ಪಿಹೆಚ್.ಡಿ. ಪದವಿ ಕಡ್ಡಾಯ ಇಲ್ಲವೆಂದ ಮೇಲೆ ಏಕೆ ಸಲ್ಲಿಸಿದರು ಎಂದು ಪ್ರಶ್ನಿಸಿದರು.

ಸದಸ್ಯರುಗಳಾದ ಶ್ರೀ ಎನ್.ಆರ್. ಮಂಜುನಾಥ್ ಮತ್ತು ಶ್ರೀ ರಾಮಲಿಂಗಪ್ಪ ಹೆಚ್., ಇವರುಗಳು ಮಾತನಾಡುತ್ತಾ, ಅಧ್ಯಯನ ಕೇಂದ್ರದವರ ವಿರುದ್ಧ ವಿದ್ಯಾಶಂಕರ್ ಎಂ.ಹೆಚ್ ರವರು ದೂರು ಸಲ್ಲಿಸಿಲ್ಲ ಎಂದು ಕೇಳಿದರು.

ಸದಸ್ಯರಾದ ಶ್ರೀ ವಿಷ್ಣುಮೂರ್ತಿಯವರು ಹಾಗೂ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಇದಕ್ಕೆ ಧ್ವನಿಗೂಡಿಸಿದರು. ಕುಲಸಚಿವರು ಮಾತನಾಡುತ್ತಾ, ಶ್ರೀ ವಿದ್ಯಾಶಂಕರ ರವರಿಗೆ ಪಿಹೆಚ್.ಡಿ ಆಧಾರದ ಮೇಲೆ ಯಾವುದೇ ಸೌಲಭ್ಯ ಮತ್ತು ಪದೋನ್ನತಿ ನೀಡಿರುವುದಿಲ್ಲ ತಿಳಿಸಿದರು. ನಂತರ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಶ್ರೀ ವಿದ್ಯಾಶಂಕರ್ ಎಂ.ಹೆಚ್., ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಪ್ರಕರಣ ದಾಖಲಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಬಹುದು ಎಂದರು.

ನಿರ್ಣಯ : ಸುದೀರ್ಘ ಚರ್ಚೆಯ ನಂತರ ಸದರಿ ವಿಷಯದ ಕುರಿತು ಮಾನ್ಯ ಕುಲಪತಿಗಳೇ ಮುಂದಿನ ನಿರ್ಧಾರ ಕೈಗೊಳ್ಳುವುದು ಎಂದು ಸಭೆಯು ನಿರ್ಣಯಿಸಿತು.

2021–ಸಿಂ–5.19(ಇ): ಅತಿಥಿ ಉಪನ್ಯಾಸಕರನ್ನು 2021–22ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸುವ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಸರ್ಕಾರದ ಪತ್ರದನ್ವಯ 2020–21ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರನ್ನು ಒಂದು ದಿನದ ಮಟ್ಟಿಗೆ ಬಿಡುಗಡೆಗೊಳಿಸಿ ಒಂದು ಬಾರಿಯ ಕ್ರಮವಾಗಿ ಮಾತ್ರ 2021–22ನೇ ಸಾಲಿಗೆ ನಿಯಯಮಾನುಸಾರ ಮುಂದುವರೆಸಲು ತೀರ್ಮಾನಿಸಲಾಯಿತು.

2021–ಸಿಂ–19(ಎಫ್): ದಿವಂಗತ ಪ್ರೊ. ನಾಗರಾಜ ರಾವ್ ಜಿ.ಕೆ. – ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ಚರ್ಚೆ : ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು ಪ್ರೊ. ನಾಗರಾಜರಾವ್ ಜಿ.ಕೆ., ಇವರು ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಅನುಕಂಪದ ಆಧಾರದ ಮೇಲಿನ ನೇಮಕಾತಿಯ ಕುರಿತು ನಿಯಮಗಳನ್ನು ಉಲ್ಲೇಖಿಸಿ ಸಭೆಗೆ ವಿವರಿಸಿದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ಇವರು ಮಾತನಾಡುತ್ತಾ, ಅನುಕಂಪದ ಆಧಾರಿತ ನೇಮಕಾತಿಯ ನಿಯಮಾವಳಿ ಮತ್ತು ಕೆ.ಸಿ.ಎಸ್.ಆರ್ ನಿಯಮಗಳ ಪ್ರಕಾರ ಪರಿಶೀಲಿಸಿ ಕಿರಿಯ ಸಹಾಯಕ / ಪ್ರಥಮ ದರ್ಜೆ ಸಹಾಯಕ ಯಾವ ಹುದ್ದೆ ನಿಯಮಾನುಸಾರ ನೀಡಬಹುದಾಗಿರುತ್ತದೋ ಅದನ್ನು ನೀಡುವುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು. ಅನುಕಂಪದ ಆಧಾರಿತ ನೇಮಕಾತಿಗಳನ್ನು ಮಾಡುವಾಗ ನಿಯಮಗಳ ಪ್ರಕಾರ ಪರಿಶೀಲಿಸಿ ಮುಂದುವರೆಯುವುದು ಸೂಕ್ತ ಎಂದು ಎಲ್ಲಾ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ನಿರ್ಣಯ : ಚರ್ಚೆಯ ನಂತರ ದಿವಂಗತ ಪ್ರೊ. ನಾಗರಾಜರಾವ್ ಜಿ.ಕೆ ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನಿಯಮಾನುಸಾರ ನೇಮಕಾತಿ ಮಾಡಲು ನಿರ್ಣಯಿಸಲಾಯಿತು.

2021–ಸಿಂ–5.19(ಜಿ): ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ಪ್ರಸ್ತಾವನೆಯಲ್ಲಿನ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚಗಳಲ್ಲಿ ವೈದ್ಯಾಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿರುವ ಅರ್ಹತಾ ಮೊತ್ತವನ್ನು ಪಾವತಿಸಲು ನಿರ್ಣಯಿಸಲಾಯಿತು.

2021–ಸಿಂ5.19(ಹೆಚ್): ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರದ ಪೂರ್ವಾನುಮೋದನೆ ಪಡೆಯದೇ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಭರ್ತಿ ಮಾಡಿಕೊಂಡಿರುವ ತಾತ್ಕಾಲಿಕ / ಗುತ್ತಿಗೆ / ಹೊರಗುತ್ತಿಗೆ ನೌಕರರನ್ನು ಕೂಡಲೇ ಬಿಡುಗಡೆ ಮಾಡುವ ಕುರಿತು.

ನಿರ್ಣಯ : ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ಮುಂದೂಡಲಾಯಿತು.

2021–ಸಿಂ–5.19(ಐ): ಹೊರಗುತ್ತಿಗೆ ಆಧಾರದ ಮೇಲೆ ("ಸಿ", "ಡಿ" ಮತ್ತು ಇತರೆ ದರ್ಜೆಯ) ಮಾನವ ಸಂಪನ್ಮೂಲ ಸೇವೆಯನ್ನು ನೀಡುತ್ತಿರುವ ಮೆ॥ ಕೆ.ಎಸ್.ಎಫ್–9, ಬೆಂಗಳೂರು ಇವರ ಸೇವೆಯನ್ನು ಅನುಮೋದಿಸುವ ಕುರಿತು.

ಚರ್ಚೆ : ಕುಲಸಚಿವರು ಪ್ರಸ್ತಾವನೆಯನ್ನು ಮಂಡಿಸಿ ಮಾತನಾಡುತ್ತಾ ಹೊರಗುತ್ತಿಗೆ ಆಧಾರದ ಮೇಲೆ ("ಸಿ", "ಡಿ" ಮತ್ತು ಇತರೆ ದರ್ಜೆಯ) ಮಾನವ ಸಂಪನ್ಮೂಲ ಸೇವೆಯನ್ನು ನೀಡುತ್ತಿರುವ ಮೆ॥ ಕೆ.ಎಸ್.ಎಫ್–9, ಸಂಸ್ಥೆಯ ಕಾರ್ಯವೈಖರಿಯ ಬಗ್ಗೆ ಶೋಕಾಸ್ ನೋಟೀಸ್ ನೀಡಲಾಗಿತ್ತು. ಅದಕ್ಕೆ ಸಂಸ್ಥೆಯವರು ನೀಡಿರುವ ಉತ್ತರವನ್ನು ಸಭೆಯ ಗಮನಕ್ಕೆ ಮಂಡಿಸಿದೆ ಎಂದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ಕೆ.ಎಸ್.ಎಫ್–9, ಸಂಸ್ಥೆಯವರು ನೀಡಿದ ಉತ್ತರವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಈ ಕೆಳಕಂಡಂತೆ ರಚಿಸಲು ತೀರ್ಮಾನಿಸಲಾಯಿತು.

1. ಶ್ರೀ ಧರ್ಮಪ್ರಸಾದ್ ಜಿ., ಸಿಂಡಿಕೇಟ್ ಸದಸ್ಯರು – ಅಧ್ಯಕ್ಷರು
2. ಶ್ರೀ ಬಿ. ನಿರಂಜನಮೂರ್ತಿ, ಸಿಂಡಿಕೇಟ್ ಸದಸ್ಯರು – ಸದಸ್ಯರು
3. ಶ್ರೀ ಬಳ್ಳೇಕೆರೆ ಸಂತೋಷ್, ಸಿಂಡಿಕೇಟ್ ಸದಸ್ಯರು – ಸದಸ್ಯರು
3. ಶ್ರೀ ಎಸ್.ಆರ್. ನಾಗರಾಜ, ಸಿಂಡಿಕೇಟ್ ಸದಸ್ಯರು – ಸದಸ್ಯರು
4. ಶ್ರೀ ರಾಮಲಿಂಗಪ್ಪ ಹೆಚ್., ಸಿಂಡಿಕೇಟ್ ಸದಸ್ಯರು – ಸದಸ್ಯರು
5. ಶ್ರೀ ರಾಮಕೃಷ್ಣ , ಹಣಕಾಸು ಅಧಿಕಾರಿಗಳು – ಸದಸ್ಯರು
6. ಉಪಕುಲಸಚಿವರು ಮಾ.ಸ.ನಿ., ವಿಭಾಗ – ಸಂಚಾಲಕರು.

ಸದರಿ ಸಮಿತಿಯ ವರದಿ ಬರುವವರೆಗೆ ಏಜೆನ್ಸಿ ನೌಕರರಿಗೆ ವೇತನ ಪಾವತಿಸಲು ಯಾವುದೇ ತೊಂದರೆ ಮಾಡಬಾರದು, ನಿಯಮಿತವಾಗಿ ಪ್ರತಿ ತಿಂಗಳು ಯಾವುದೇ ವಿಳಂಬವಿಲ್ಲದೇ ಪೂರ್ಣ ವೇತನ ಪಾವತಿ ಮಾಡಬೇಕು ಎಂದು ನಿರ್ಣಯಿಸಲಾಯಿತು.

## ಅಭಿವೃದ್ಧಿ ವಿಭಾಗ

**2021–ಸಿಂ–5.19(ಜೆ):** ಸಂಶೋಧನಾ ಕಾರ್ಯಕ್ಕೆ Jain (Deemed to be University) ಬೆಂಗಳೂರು– ಇವರೊಂದಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು.

ನಿರ್ಣಯ : ಚರ್ಚೆಯ ನಂತರ ಸಂಶೋಧನಾ ಕಾರ್ಯಕ್ಕೆ Jain (Deemed to be University) ಬೆಂಗಳೂರು – ಇವರೊಂದಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಒಡಂಬಡಿಕೆ (MOU) ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

## ಹಣಕಾಸು ವಿಭಾಗ

**2021–ಸಿಂ–5.19(ಕೆ):** 2020–21ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಮತ್ತು ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ 2020–21 ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಅನುಮೋದಿಸಲಾಯಿತು.

## ಪ್ರಾಧಿಕಾರ ವಿಭಾಗ

**2021–ಸಿಂ–5.19(ಎಲ್):** STATUTE GOVERNING THE ESTABLISHMENT OF SRIMAD RAMBHAPURI SRI RENUKAACHARYA STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ : ಚರ್ಚೆಯ ನಂತರ ಪ್ರಸ್ತಾವನೆಯಲ್ಲಿನ ಪರಿನಿಯಮವನ್ನು ಅನುಮೋದಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2021–ಸಿಂ–5.19(ಎಂ):** 2021–22 ನೇ ಸಾಲಿನಲ್ಲಿ ಶಿಫಾರಸ್ಸುಗೊಂಡ ಕಾಲೇಜುಗಳ ಹೊಸ ಕೋರ್ಸುಗಳನ್ನು ಅನುಮೋದನೆಗೆ ಮಂಡಿಸುವ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಕಟೀಲ್ ಅಶೋಕ್ ಪೈ ಮೆಮೋರಿಯಲ್ ಇನ್ಸ್‌ಟಿಟ್ಯೂಟ್, ಶಿವಮೊಗ್ಗ ಮತ್ತು ಆದಿಚುಂಚನಗಿರಿ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್, ಚಿಕ್ಕಮಗಳೂರು ಈ ಎರಡೂ ಕಾಲೇಜುಗಳಿಗೆ ಶಿಫಾರಸ್ಸುಗೊಂಡಿರುವ ಹೊಸ ಕೋರ್ಸುಗಳನ್ನು ಅನುಮೋದಿಸಲಾಯಿತು.

## ಶೈಕ್ಷಣಿಕ ವಿಭಾಗ

**2021–ಸಿಂ–5.19(ಎನ್):** **ಪಿಹೆಚ್.ಡಿ ನಿಯಮಾವಳಿ 2017 ಕ್ಕೆ ಸಂಬಂಧಿಸಿದಂತೆ ನಿಯಮಾವಳಿಯಲ್ಲಿ ತಿದ್ದುಪಡಿ / ಮಾರ್ಪಾಡು ಮಾಡುವ ಕುರಿತು.**

ನಿರ್ಣಯ : ಚರ್ಚೆಯ ನಂತರ ಪರಿಷ್ಕೃತ ಪಿಹೆಚ್.ಡಿ ವಿನಿಯಮ 2017 ಕ್ಕೆ ಮಾಡಿರುವ ತಿದ್ದುಪಡಿ ಮಾಡಿರುವ ವಿನಿಯಮವನ್ನು ಅನುಮೋದಿಸಲಾಯಿತು. ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಸ್ಥಿತ್ವದಲ್ಲಿರುವ 2017ರ ಪಿಹೆಚ್.ಡಿ., ವಿನಿಯಮಾವಳಿಗಳಿಗೆ ತಿದ್ದುಪಡಿಯನ್ನು ಮಂಡಿಸಿದ್ದು, ಸಭೆಯು ಸರ್ವಾನುಮತದಿಂದ ಯಥಾವತ್ತಾಗಿ ಅನುಮೋದನೆ ನೀಡಿತು.

**2021–ಸಿಂ–5.20 :** ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು: ಯಾವುದು ಇರುವುದಿಲ್ಲ.

**2021–ಸಿಂ–5.21 :** ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ : ಯಾವುದೂ ಇರುವುದಿಲ್ಲ.

**2021–ಸಿಂ–5.22:** **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ರವರು ಮಾತನಾಡಿ ಡಾ. ಗೀತಾ ಸಿ., ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರನ್ನೇ ಶಿಕ್ಷಣ ನಿಕಾಯದ ಡೀನರಾಗಿ ನೇಮಕ ಮಾಡಿ ಎಂದು ಆಗ್ರಹಿಸಿದರು. ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಕುಲಸಚಿವರು ನೀಡಿದ ಉತ್ತರವನ್ನು ಸಭೆಯು ಒಪ್ಪಿತು.

ನಿರ್ಣಯ : ಚರ್ಚೆಯ ನಂತರ ನಿಯಮಾನುಸಾರ ಡೀನರ ನೇಮಕಾತಿ ಮಾಡಲು ನಿರ್ಣಯಿಸಲಾಯಿತು

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡುತ್ತಾ ಪ್ರಸ್ತುತ ಯಾವ ಅತಿಥಿ ಉಪನ್ಯಾಸಕರು 5 ರಿಂದ 10 ವರ್ಷಗಳತನಕ ಅತಿಥಿ ಉಪನ್ಯಾಕರಾಗಿ ಸೇವೆ ಸಲ್ಲಿಸಿರುತ್ತಾರೋ ಅಂಥಹವರ ಪಟ್ಟಿ ತಯಾರಿಸಿ ಅವರಿಗೆ ಪೂರ್ಣಕಾಲಿಕ ಬೋಧನಾಕಾರ್ಯಭಾರವನ್ನು ಹಂಚಿಕೆ ಮಾಡಿ ಉಳಿದ ಅವಧಿಯನ್ನು ಹೊಸಬರಿಗೆ ಹಂಚುವುದು ಎಂದರು. ಹಾಗೂ 5 ರಿಂದ 10 ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿರುವವರಿಗೆ ಸೇವಾವಧಿಯಲ್ಲಿ ಒಂದು ದಿನ ಬ್ರೇಕ್ ಮಾಡಿ ಸೇವೆಯಲ್ಲಿ ಮುಂದುವರೆಸಿ 12 ತಿಂಗಳು ಸಂಬಳ ನೀಡುವುದು ಹಾಗೂ ಗ್ರೂಪ್ ಇನ್ಸೂರೆನ್ಸ್ ಹಾಗೂ ಇಎಸ್‌ಐ ಸೌಲಭ್ಯ ನೀಡುವುದು ಸೂಕ್ತವೆಂದರು ಜೊತೆಗೆ ಶ್ರೀ ಧರ್ಮಪ್ರಸಾದ್ ಜಿ. ರವರು ಈ ಸಂಬಂಧವಾಗಿ ಕೆಳಕಂಡಂತೆ ಸಮಿತಿಯನ್ನು ಮಾಡಲು ತಿಳಿಸಿದರು.

1. ಕುಲಸಚಿವರು – ಅಧ್ಯಕ್ಷರು
2. ಡೀನರುಗಳು – ಸದಸ್ಯರು
3. ಶ್ರೀ ಧರ್ಮಪ್ರಸಾದ್ ಜಿ. – ಸದಸ್ಯರು
4. ಉಪಕುಲಸಚಿವರು ಮಾ.ಸ.ನಿ. ವಿಭಾಗ – ಸಂಚಾಲಕರು

ಅತಿಥಿ ಉಪನ್ಯಾಸಕರಲ್ಲಿ ಯಾರಾದರೂ ಪಿಹೆಚ್.ಡಿ., ಮಾಡಲು ಇಚ್ಛೆ ಹೊಂದಿದ್ದಲ್ಲಿ ಅವರಿಗೆ ಪಾರ್ಟ್ ಟೈಮ್ ಆಗಿ ಪಿಹೆಚ್.ಡಿ., ಮಾಡಲು ಅವಕಾಶ ನೀಡುವುದು, ಅತಿಥಿ ಉಪನ್ಯಾಸಕರಲ್ಲಿ ಪಿಹೆಚ್.ಡಿ. / ನೆಟ್/ ಸ್ಲೆಟ್ ಉತ್ತೀರ್ಣರಾದವರು ಇದ್ದರೆ ಅವರಿಗೆ ಸಂಚಿತ ವೇತನ ನೀಡುವುದು ಎಂದರು.

ಅತಿಥಿ ಉಪನ್ಯಾಸಕರು ಸಹ ಸೆಮಿನಾರ್ / ಕಾನ್ಫರೆನ್ಸ್ / ಹಾಗೂ ವರ್ಕ್‌ಶಾಪ್‌ಗಳಲ್ಲಿ ಭಾಗವಹಿಸಿ, ಲೇಖನಗಳನ್ನು ಪ್ರಕಟಿಸಲು ಅವಕಾಶ ಒದಗಿಸುವುದು ಎಂದು ಕೋರಿದರು.

ಕೊನೆಯಲ್ಲಿ ಮೇಲ್ಕಂಡ ಎಲ್ಲ ವಿಷಯಗಳ ಕುರಿತು ಪರಿಶೀಲಿಸಲು ಕುಲಸಚಿವ (ಪರೀಕ್ಷಾಂಗ) ರವರ ಅಧ್ಯಕ್ಷತೆಯಲ್ಲಿ ಎಲ್ಲಾ ಡೀನರು, ಶ್ರೀ ಧರ್ಮಪ್ರಸಾದ್ ಜಿ., ಸಿಂಡಿಕೇಟ್ ಸದಸ್ಯರು ಹಾಗೂ ಮಾನವ ಸಂಪನ್ಮೂಲ ವಿಭಾಗದ ಉಪಕುಲಸಚಿವರು ಸಂಚಾಲಕರನ್ನಾಗಿ ನೇಮಿಸಿ ಒಂದು ಸಮಿತಿಯನ್ನು ರಚಿಸಲು ಕೋರಿದರು. ಮಾನ್ಯ ಕುಲಪತಿಗಳು ಈ ಕುರಿತು ಪರಿಶೀಲಿಸುವುದಾಗಿ ತಿಳಿಸಿದರು.

ನಂತರ ಮಾತನಾಡಿದ ಮಾನ್ಯ ಕುಲಪತಿಗಳು, 31ನೇ ಘಟಿಕೋತ್ಸವದಲ್ಲಿ ಪ್ರಧಾನ ಮಾಡಬೇಕಾದ ಗೌರವ ಡಾಕ್ಟರೇಟ್ ಪದವಿಯ ಅರ್ಜಿಗಳನ್ನು ಪರಿಶೀಲಿಸಲು ರಚಿಸಲಾಗುವ ಸಮಿತಿಗೆ ಡಾ. ಶಿವಾನಂದ ಹೊಸಮನಿ, ವಿಶ್ರಾಂತ ಕುಲಪತಿಗಳು, ರಾಣಿಚೆನ್ನಮ್ಮ ವಿಶ್ವವಿದ್ಯಾಲಯ – ಇವರನ್ನು ಅಧ್ಯಕ್ಷರನ್ನಾಗಿ ಮಾಡಬಹುದು ಎಂದರು ಹಾಗೂ ಸಿಂಡಿಕೇಟ್ ಸಧಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ಮತ್ತು ಶ್ರೀ ಬಿ. ನಿರಂಜನಮೂರ್ತಿ ಇವರುಗಳನ್ನು ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಲು ಅನುಮೋದಿಸಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಹಿ/–
ಕುಲಪತಿಗಳು